ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 98-101
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೃಷ್ಣರಾಜನಗರ ತಾಲೂಕಿನ ಜಾತ್ರೆಗಳು–ಒಂದು ಸಂಕ್ಷಿಪ್ತ ಅವಲೋಕನ

**ಡಾ. ಎಸ್. ಹರೀಶ್ ಕುಮಾರ್**

ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀರೂರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ

**Abstract:**

*ಕೃಷ್ಣರಾಜನಗರ ತಾಲೂಕಿನ ಜಾತ್ರೆಗಳು ಸ್ಥಳೀಯ ಸಂಸ್ಕೃತಿ, ಧಾರ್ಮಿಕ ನಂಬಿಕೆ ಮತ್ತು ಜನಪದ ಪರಂಪರೆಯ ಪ್ರತೀಕಗಳಾಗಿವೆ. ಈ ಜಾತ್ರೆಗಳು ವಿವಿಧ ದೇವಾಲಯಗಳು ಹಾಗೂ ಗ್ರಾಮ ದೇವತೆಗಳ ಆರಾಧನೆಯೊಂದಿಗೆ ಜನರನ್ನು ಒಗ್ಗೂಡಿಸುವ ಸಾಮಾಜಿಕ–ಸಾಂಸ್ಕೃತಿಕ ವೇದಿಕೆಯಾಗಿವೆ. ಜಾತ್ರೆಗಳ ಮೂಲಕ ಜನಪದ ಕಲೆಗಳು, ಆಚರಣೆಗಳು, ವ್ಯಾಪಾರ ಚಟುವಟಿಕೆಗಳು ಹಾಗೂ ಸಾಂಪ್ರದಾಯಿಕ ಜೀವನಶೈಲಿಯು ಜೀವಂತವಾಗಿ ಉಳಿದುಕೊಂಡಿವೆ. ಕೃಷ್ಣರಾಜನಗರ ತಾಲೂಕಿನ ಪ್ರಮುಖ ಜಾತ್ರೆಗಳ ವೈಶಿಷ್ಟ್ಯ, ಅವುಗಳ ಸಾಮಾಜಿಕ ಮತ್ತು ಆರ್ಥಿಕ ಮಹತ್ವವನ್ನು ಈ ಲೇಖನವು ಸಂಕ್ಷಿಪ್ತವಾಗಿ ಅವಲೋಕಿಸುತ್ತದೆ. ಗ್ರಾಮೀಣ ಪರಂಪರೆಯ ಸಂರಕ್ಷಣೆ ಮತ್ತು ಸಾಂಸ್ಕೃತಿಕ ಪರಂಪರೆಯ ನಿರಂತರತೆಯಲ್ಲಿ ಜಾತ್ರೆಗಳ ಪಾತ್ರವನ್ನು ಈ ಅಧ್ಯಯನ ಒತ್ತಿಹೇಳುತ್ತದೆ.*

**Keywords:** *ಕೃಷ್ಣರಾಜನಗರ ತಾಲೂಕು, ಜಾತ್ರೆಗಳು, ಜನಪದ ಸಂಸ್ಕೃತಿ, ಧಾರ್ಮಿಕ ಆಚರಣೆಗಳು, ಸಾಂಸ್ಕೃತಿಕ ಪರಂಪರೆ*

## ಪೀಠಿಕೆ

ಮೈಸೂರು ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ಕೃಷ್ಣರಾಜನಗರ ತಾಲೂಕು ಪ್ರಮುಖವಾದುದಾಗಿದೆ. ಮೈಸೂರಿನಿಂದ ಸುಮಾರು 42 ಕಿ.ಮೀ. ವಾಯುವ್ಯ ದಿಕ್ಕಿನಲ್ಲಿರುವ ಈ ತಾಲೂಕು ಪ್ರಾಚೀನ ಕಾಲದಲ್ಲಿ "ಎಡತೊರೆ" ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಕಾವೇರಿ ನದಿಯು ಈ ಪ್ರದೇಶದಲ್ಲಿ ಎಡಭಾಗಕ್ಕೆ ತಿರುಗುವ ಸ್ಥಳದಲ್ಲಿರುವುದರಿಂದ ಈ ಊರಿಗೆ ಎಡತೊರೆ ಎಂಬ ಹೆಸರು ಬಂದಿದೆ. ಜೀವನಾಡಿಯಾದ ಕಾವೇರಿ ನದಿಯಿಂದ ಈ ಪ್ರದೇಶವು ಸಮೃದ್ಧವಾದ ಕೃಷಿ ಮತ್ತು ನೈಸರ್ಗಿಕ ಸಂಪತ್ತಿನಿಂದ ಕೂಡಿದೆ.

ಇತಿಹಾಸದ ದೃಷ್ಟಿಯಿಂದ ಕೃಷ್ಣರಾಜನಗರ ತಾಲೂಕು ಅತ್ಯಂತ ಮಹತ್ವದ್ದಾಗಿದೆ. ಈ ಪ್ರದೇಶದಲ್ಲಿ ಇದುವರೆಗೆ 119ಕ್ಕೂ ಅಧಿಕ ಶಾಸನಗಳು ಪತ್ತೆಯಾಗಿದ್ದು, ಅವು ಈ ಭಾಗದ ಐತಿಹಾಸಿಕ ಹಿನ್ನೆಲೆಯನ್ನು ಬೆಳಕಿಗೆ ತರುತ್ತವೆ. ಕೆಲವು ವಿದ್ವಾಂಸರ ಅಭಿಪ್ರಾಯದಂತೆ, "ಇಡೈ ತುರೈ" ಎಂಬ ದ್ರಾವಿಡ ಪದವು ಕಾಲಕ್ರಮೇಣ ಎಡತೊರೆ ಎಂಬ ಹೆಸರಾಗಿ ರೂಪಾಂತರಗೊಂಡು, ನಂತರ ಕೃಷ್ಣರಾಜನಗರ ಎಂಬ ಹೆಸರು ಪ್ರಚಲಿತಕ್ಕೆ ಬಂದಿದೆ. ಕಾವೇರಿ ನದಿಯ ಪ್ರವಾಹದಿಂದ ಎಡತೊರೆಯ ಒಂದು ಭಾಗವು ಆಗಾಗ್ಗೆ ಜಲಾವೃತವಾಗುತ್ತಿದ್ದ ಕಾರಣ

**Please cite this article as:** ಹರೀಶ್ ಕುಮಾರ್, ಎಸ್. (2026). ಕೃಷ್ಣರಾಜನಗರ ತಾಲೂಕಿನ ಜಾತ್ರೆಗಳು–ಒಂದು ಸಂಕ್ಷಿಪ್ತ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 98–101

ತಾಲೂಕು ಕೇಂದ್ರವನ್ನು ಎಡತೊರೆಯಿಂದ ಸುಮಾರು 3 ಕಿ.ಮೀ. ದೂರಕ್ಕೆ ಸ್ಥಳಾಂತರಿಸಿ, 1934ರಲ್ಲಿ ಕೃಷ್ಣರಾಜನಗರ ಪಟ್ಟಣವನ್ನು ನಿರ್ಮಿಸಲಾಯಿತು. ಕೃಷ್ಣರಾಜನಗರ ತಾಲೂಕಿಗೆ ಸಾಲಿಗ್ರಾಮ, ಪಿರಿಯಾಪಟ್ಟಣ, ಹುಣಸೂರು ಹಾಗೂ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕುಗಳು ಗಡಿಯಾಗಿವೆ.

ಈ ತಾಲೂಕಿನಲ್ಲಿ ದೊರೆತ 119 ಶಾಸನಗಳಲ್ಲಿ ಕೆಲವು ಶಾಸನಗಳು ಈ ಪ್ರದೇಶವನ್ನು ತೊರ್ರೈನಾಡು, ಎಡತೊರೆನಾಡು, ಎಡತೊರೆನಾಡು–1000, ಎಡೆನಾಡು ಮುಂತಾದ ಹೆಸರುಗಳಿಂದ ಉಲ್ಲೇಖಿಸಿವೆ. ಕಾವೇರಿಯ ಎಡ ದಂಡೆಯ ಈ ಪ್ರದೇಶವು ಗಂಗವಾಡಿ–96,000ರ ಪ್ರಮುಖ ಆಡಳಿತ ವಿಭಾಗವಾಗಿದ್ದುದಾಗಿ ತಿಳಿದುಬರುತ್ತದೆ. ಅಲ್ಲದೆ, ಇಲ್ಲಿ ದೊರೆತ ಶಾಸನಗಳು ಈ ಪ್ರದೇಶವು ಗಂಗರು, ಚೋಳರು, ಹೊಯ್ಸಳರು, ಕೊಂಗಾಳ್ವರು, ಚೆಂಗಾಳ್ವರು, ವಿಜಯನಗರ ಸಾಮ್ರಾಜ್ಯ, ಉಮ್ಮತ್ತೂರು ನಾಯಕರು, ಬೇಲೂರು ಆಡಳಿತಗಾರರು ಹಾಗೂ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತೆಂಬುದನ್ನು ದೃಢಪಡಿಸುತ್ತವೆ. ವಿಶೇಷವಾಗಿ ಚಂಗಾಳ್ವರು ಮತ್ತು ಹೊಯ್ಸಳರ ಕಾಲದಲ್ಲಿ ಈ ಪ್ರದೇಶವು ಹೆಚ್ಚಿನ ಪ್ರಾಮುಖ್ಯತೆ ಪಡೆದಿತ್ತು.

ಈ ತಾಲೂಕಿಗೆ ಸಂಬಂಧಿಸಿದ ಪ್ರಮುಖ ಶಾಸನಗಳಲ್ಲಿ ಶ್ರೀಪುರುಷನ ಸಾಲಿಗ್ರಾಮ ತಾಮ್ರಶಾಸನ, ಮೊದಲನೆಯ ಗಂಗ ರಾಚಮಲ್ಲನ ಸಾಲಿಗ್ರಾಮ ದಾನಶಾಸನ, ಚಿಕ್ಕಹನಸೋಗೆಯ ವೀರಗಲ್ಲು ಶಾಸನ, ಮೊದಲನೆಯ ರಾಜೇಂದ್ರ ಚೋಳನ ಹಂಪಾಪುರ ಶಾಸನ, ಮೊದಲನೆಯ ಕುಲೋತ್ತುಂಗ ಚೋಳನ ತಿಪ್ಪೂರು ಶಾಸನ, ಹೊಯ್ಸಳ ವಿಷ್ಣುವರ್ಧನನ ಲಾಲನಹಳ್ಳಿ ಶಾಸನ, ಚಿಕ್ಕಹನಸೋಗೆ ಶಾಸನ, ಗಳಿಗೆಕೆರೆ ಶಾಸನ, ಭೇರ್ಯ ಶಾಸನ ಹಾಗೂ ಮಾರ್ಚಳ್ಳಿ ಶಾಸನ ಪ್ರಮುಖವಾಗಿವೆ.

**ಕೃಷ್ಣರಾಜನಗರ ತಾಲೂಕಿನ ಪ್ರಮುಖ ಜಾತ್ರೆಗಳು**

ಜನಪದ ಸಂಸ್ಕೃತಿಯ ವಿಶಿಷ್ಟ ಅಭಿವ್ಯಕ್ತಿಗಳಲ್ಲಿ ಜಾತ್ರೆ ಪ್ರಮುಖ ಸ್ಥಾನವನ್ನು ಹೊಂದಿದೆ. ಜಾತ್ರೆಗಳು ಧಾರ್ಮಿಕ ಆಚರಣೆಗಳಷ್ಟೇ ಅಲ್ಲದೆ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಜೀವನದ ಅವಿಭಾಜ್ಯ ಅಂಗಗಳಾಗಿವೆ. ದೇವರನ್ನು ಭಕ್ತಿ–ಶ್ರದ್ಧೆಯಿಂದ ಆರಾಧಿಸುವುದು, ಜನಸಾಮಾನ್ಯರು ಒಂದೆಡೆ ಸೇರಿ ಸಂಭ್ರಮಿಸುವುದು, ಆಟೋಟ ಹಾಗೂ ಮನರಂಜನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಜಾತ್ರೆಗಳ ಪ್ರಮುಖ ವೈಶಿಷ್ಟ್ಯವಾಗಿದೆ. ಅನೇಕ ಜಾತ್ರೆಗಳಲ್ಲಿ ಜಾನುವಾರು ವ್ಯಾಪಾರದ ಜೊತೆಗೆ ಸರ್ಕಾರದ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪ್ರದರ್ಶನಗಳು ನಡೆಯುತ್ತವೆ. ರೈತರಿಗೆ ಅಗತ್ಯವಾದ ಕೃಷಿ ಉಪಕರಣಗಳು, ಜಾನುವಾರುಗಳು, ಗೃಹೋಪಯೋಗಿ ವಸ್ತುಗಳು ಹಾಗೂ ವಿವಿಧ ವಾಣಿಜ್ಯ ವಸ್ತುಗಳು ಜಾತ್ರೆಗಳಲ್ಲಿ ಲಭ್ಯವಾಗುತ್ತವೆ. ಮಕ್ಕಳಿಗೆ ಬತ್ತಾಸು, ಪುರಿ, ಖರ್ಜೂರ, ಸಿಹಿತಿಂಡಿಗಳು ದೊರೆಯುವುದಾದರೆ, ಹಿರಿಯರಿಗೆ ಬಟ್ಟೆ, ಬಳೆ, ಅಲಂಕಾರಿಕ ವಸ್ತುಗಳು ಸೇರಿದಂತೆ ಅನೇಕ ಅಗತ್ಯ ವಸ್ತುಗಳು ದೊರೆಯುತ್ತವೆ. ಹೀಗಾಗಿ ಜಾತ್ರೆಗಳು ಧಾರ್ಮಿಕ ಆಚರಣೆಗಳ ಜೊತೆಗೆ ಗ್ರಾಮೀಣ ಆರ್ಥಿಕ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿವೆ.

ರಥೋತ್ಸವವು ಬಹುತೇಕ ಎಲ್ಲಾ ಜಾತ್ರೆಗಳ ಪ್ರಮುಖ ಆಕರ್ಷಣೆಯಾಗಿದೆ. ಇದನ್ನು ತೇರು, ರಥ, ಬಂಡಿ ಅಥವಾ ಸಿಡಿ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಸುಂದರವಾಗಿ ಅಲಂಕರಿಸಿದ ರಥದ ಮೇಲೆ ದೇವರ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಭಕ್ತರು ತೇರಿನ ಮೇಲೆ ಹಣ್ಣು ಹಾಗೂ ಧಾನ್ಯಗಳನ್ನು ಎರಚಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ.

ಕೃಷ್ಣರಾಜನಗರ ತಾಲೂಕಿನ ಚುಂಚನಕಟ್ಟೆ, ಕಪ್ಪಡಿ, ಎಡತೊರೆ, ಡೋರನಹಳ್ಳಿ, ಹಂಪಾಪುರ, ತಿಪ್ಪೂರು, ಮಾವತ್ತೂರು, ಹನಸೋಗೆ, ಭೇರ್ಯ, ಮಿರ್ಲೆ,

ಸಾಲಿಗ್ರಾಮ, ಚಿಕ್ಕಹನಸೋಗೆ, ಅರ್ಜುನಹಳ್ಳಿ ಹಾಗೂ ಮೈಸೂರು ರಸ್ತೆಯ ತೋಪಮ್ಮ ದೇವಾಲಯಗಳಲ್ಲಿ ಪ್ರತಿವರ್ಷ ವೈವಿಧ್ಯಮಯ ಜಾತ್ರೆಗಳು ನಡೆಯುತ್ತವೆ.

**ಚುಂಚನಕಟ್ಟೆ ಜಾತ್ರೆ**

ಪೌರಾಣಿಕ ಹಿನ್ನೆಲೆಯ ಪ್ರಕಾರ, ಎಡತೊರೆ ಪ್ರದೇಶದ ಚುಂಚನಕಟ್ಟೆಯು ಹಿಂದೆ ದಂಡಕಾರಣ್ಯದ ಭಾಗವಾಗಿದ್ದು, ಶ್ರೀರಾಮ, ಸೀತೆ ಹಾಗೂ ಲಕ್ಷ್ಮಣರು ಇಲ್ಲಿ ಕೆಲಕಾಲ ವಾಸವಿದ್ದರೆಂಬ ಪ್ರತೀತಿ ಇದೆ. ಕಾವೇರಿ ಜಲಪಾತದ ಸಮೀಪದಲ್ಲಿರುವ "ಸೀತೆಮಡು" ಈ ನಂಬಿಕೆಗೆ ಸಾಕ್ಷಿಯೆಂದು ಸ್ಥಳೀಯರು ಪರಿಗಣಿಸುತ್ತಾರೆ. ಅಲ್ಲದೆ, ಶ್ರೀರಾಮ ದೇವಾಲಯದ ಬಳಿಯ "ಚುಂಚ" ಎಂಬ ಋಷಿಯು ನಿರ್ಮಿಸಿದ ಅಣೆಕಟ್ಟೆಯಿಂದ ಈ ಪ್ರದೇಶಕ್ಕೆ ಚುಂಚನಕಟ್ಟೆ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ.

ಇಲ್ಲಿ ಪ್ರತಿವರ್ಷ ಜನವರಿ ತಿಂಗಳಲ್ಲಿ ಸುಮಾರು ಹದಿನೈದು ದಿನಗಳ ಕಾಲ ಶ್ರೀ ಕೋದಂಡರಾಮಸ್ವಾಮಿಯ ರಥೋತ್ಸವ ಮತ್ತು ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಈ ಜಾತ್ರೆಯು ಕರ್ನಾಟಕದ ಪ್ರಮುಖ ಜಾನುವಾರು ಜಾತ್ರೆಗಳಲ್ಲಿ ಒಂದಾಗಿದ್ದು, ಉತ್ತರ ಕರ್ನಾಟಕ ಸೇರಿದಂತೆ ಧಾರವಾಡ, ಹಾವೇರಿ, ಗದಗ, ಹಾಸನ, ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಿಂದ ರೈತರು ಎತ್ತು ಮತ್ತು ದನಗಳನ್ನು ಖರೀದಿಸಲು ಆಗಮಿಸುತ್ತಾರೆ. ಧಾರ್ಮಿಕ ಮಹತ್ವದ ಜೊತೆಗೆ ಚುಂಚನಕಟ್ಟೆ ಸುಂದರ ಪ್ರವಾಸಿ ತಾಣವಾಗಿಯೂ ಪ್ರಸಿದ್ಧವಾಗಿದೆ. ಸಾಲಿಗ್ರಾಮದಿಂದ ಸುಮಾರು 7 ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರವು ತನ್ನ ಜಲಪಾತ ಮತ್ತು ದನಗಳ ಜಾತ್ರೆಯಿಂದ ಹೆಸರುವಾಸಿಯಾಗಿದೆ.

**ಕಪ್ಪಡಿ ಜಾತ್ರೆ**

ಕಪ್ಪಡಿಯು ಕೃಷ್ಣರಾಜನಗರ ಪಟ್ಟಣದಿಂದ ಸುಮಾರು 15 ಕಿ.ಮೀ. ದೂರದಲ್ಲಿ ಕಾವೇರಿ ನದಿಯ ದಂಡೆಯಲ್ಲಿರುವ ಐತಿಹಾಸಿಕ ಕ್ಷೇತ್ರವಾಗಿದೆ. ಇಲ್ಲಿ ಶರಣ ಪರಂಪರೆಯ ರಾಚಪ್ಪಾಜಿ ಹಾಗೂ ಚೆನ್ನಮ್ಮಾಜಿಯವರ ಗದ್ದುಗೆಗಳಿವೆ. ಶಿವರಾತ್ರಿಯಿಂದ ಯುಗಾದಿಯವರೆಗೆ ಸುಮಾರು ಒಂದು ತಿಂಗಳ ಕಾಲ ನಡೆಯುವ ಈ ಜಾತ್ರೆಗೆ ನೀಲಗಾರ ಪರಂಪರೆಯ ಮಂಟೇಸ್ವಾಮಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಜಾತ್ರೆಯ ಅವಧಿಯಲ್ಲಿ ರಾಚಪ್ಪಾಜಿ ಮತ್ತು ಚೆನ್ನಮ್ಮಾಜಿಯವರ ಗದ್ದುಗೆಗಳಿಗೆ ತೆಂಗಿನಕಾಯಿ ಒಡೆಯುವ ಸಂಪ್ರದಾಯವಿಲ್ಲ. ಅರಸು ಮನೆತನದ ಧರ್ಮಾಧಿಕಾರಿಗಳು ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಡುತ್ತಾರೆ. ಒಂದು ತಿಂಗಳ ಕಾಲ ನೀಲಗಾರರು ಮಂಟೇಸ್ವಾಮಿ ಪದ್ಯಗಳನ್ನು ನಿರಂತರವಾಗಿ ಹಾಡುವುದು ಈ ಜಾತ್ರೆಯ ವಿಶೇಷವಾಗಿದೆ.

**ಅರ್ಕೇಶ್ವರ ಜಾತ್ರೆ**

ಕೃಷ್ಣರಾಜನಗರದಿಂದ ಸುಮಾರು 3 ಕಿ.ಮೀ. ದೂರದಲ್ಲಿರುವ ಎಡತೊರೆಯ ಅರ್ಕೇಶ್ವರಸ್ವಾಮಿ ದೇವಾಲಯದಲ್ಲಿ ರಥಸಪ್ತಮಿಯಂದು ಜಾತ್ರೆ ನಡೆಯುತ್ತದೆ. ಪೌರಾಣಿಕ ನಂಬಿಕೆಯ ಪ್ರಕಾರ ಅರ್ಕೇಶ್ವರ ಲಿಂಗವನ್ನು ಸೂರ್ಯದೇವನೇ ಪ್ರತಿಷ್ಠಾಪಿಸಿ ಆರಾಧಿಸಿದ್ದರಿಂದ ಈ ದೇವರಿಗೆ "ಅರ್ಕೇಶ್ವರ" ಎಂಬ ಹೆಸರು ಬಂದಿದೆ. ಶಿವರಾತ್ರಿಯಂದು ಬೆಳಗಿನ ಸೂರ್ಯಕಿರಣಗಳು ನೇರವಾಗಿ ಶಿವಲಿಂಗದ ಮೇಲೆ ಬೀಳುವ ಅಪರೂಪದ ದೃಶ್ಯವನ್ನು ವೀಕ್ಷಿಸಲು ಸಾವಿರಾರು ಭಕ್ತರು ಆಗಮಿಸುತ್ತಾರೆ.

**ಹುಣಸಮ್ಮನ ಜಾತ್ರೆ**

ತಾಲೂಕು ಕೇಂದ್ರದಿಂದ ಸುಮಾರು 20 ಕಿ.ಮೀ. ದೂರದಲ್ಲಿರುವ ಮಿರ್ಲೆ ಗ್ರಾಮದಲ್ಲಿ ಹುಣಸಮ್ಮನ ಜಾತ್ರೆ ನಡೆಯುತ್ತದೆ. ಬೀಚನಹಳ್ಳಿ, ಬೀಚನಹಳ್ಳಿ ಕೊಪ್ಪಲು, ಹನುಮನಹಳ್ಳಿ, ನಾರ್ಚಹಳ್ಳಿ, ಕೊಡಿಯಾಲ, ಹಳೆಮಿರ್ಲೆ ಸೇರಿದಂತೆ ಏಳು ಗ್ರಾಮಗಳ ಭಕ್ತರು ತಮ್ಮ ಗ್ರಾಮಗಳಿಂದ

ಅಲಂಕರಿಸಿದ ಸಿಡಿಗಳನ್ನು ದೇವಾಲಯಕ್ಕೆ ತಂದು ರಾತ್ರಿಯಿಡೀ ಮೆರವಣಿಗೆ ನಡೆಸುತ್ತಾರೆ. ಈ ವೈಶಿಷ್ಟ್ಯಪೂರ್ಣ ಮೆರವಣಿಗೆಯು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದೆ.

**ಡೋರನಹಳ್ಳಿ ಜಾತ್ರೆ**

ತಾಲೂಕು ಕೇಂದ್ರದಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಡೋರನಹಳ್ಳಿಯ ಸಂತ ಅಂತೋಣಿ ಚರ್ಚ್‌ನಲ್ಲಿ ಪ್ರತಿವರ್ಷ ಜೂನ್ 13ರಂದು ವಾರ್ಷಿಕೋತ್ಸವ ಮತ್ತು ವಿಶೇಷ ಪ್ರಾರ್ಥನೆಗಳು ನಡೆಯುತ್ತವೆ. ಕರ್ನಾಟಕದ ವಿವಿಧ ಜಿಲ್ಲೆಗಳಷ್ಟೇ ಅಲ್ಲದೆ ನೆರೆಯ ರಾಜ್ಯಗಳಿಂದಲೂ ಲಕ್ಷಾಂತರ ಭಕ್ತರು ಈ ಸಂದರ್ಭದಲ್ಲಿ ಆಗಮಿಸುತ್ತಾರೆ.

**ದೊಡ್ಡಮ್ಮ–ಕರಿಯಮ್ಮನ ಜಾತ್ರೆ**

ಕೃಷ್ಣರಾಜನಗರದಿಂದ ಸುಮಾರು 20 ಕಿ.ಮೀ. ದೂರದಲ್ಲಿರುವ ಭೇರ್ಯ ಗ್ರಾಮದಲ್ಲಿ ಗ್ರಾಮದೇವತೆಗಳಾದ ದೊಡ್ಡಮ್ಮ ಮತ್ತು ಕರಿಯಮ್ಮನ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಸಿಡಿ ಎಳೆಯುವ ಸಂಪ್ರದಾಯ ವಿಶೇಷವಾಗಿದೆ. ಹಿಂದೆ ಕೋಣಗಳನ್ನು ಬಲಿಕೊಡುವ ಪದ್ಧತಿ ಇದ್ದರೂ, ಪ್ರಸ್ತುತ ಆ ಪದ್ಧತಿಯನ್ನು ನಿಲ್ಲಿಸಿ ಕೋಣದ ಮೌಲ್ಯವನ್ನು ದೇವಾಲಯಕ್ಕೆ ಕಾಣಿಕೆಯಾಗಿ ಸಲ್ಲಿಸುವ ಆಚರಣೆ ರೂಢಿಯಲ್ಲಿದೆ. ಕೊಡಗು, ಮಂಡ್ಯ, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಭಕ್ತರು ಆಗಮಿಸುತ್ತಾರೆ. ಸಿಡಿಗೆ ಬಾಳೆಗೊನೆ ಕಟ್ಟುವ ವಿಶೇಷ ಸೇವೆಯು ಈ ಜಾತ್ರೆಯ ಮತ್ತೊಂದು ವೈಶಿಷ್ಟ್ಯವಾಗಿದೆ.

ಇವುಗಳ ಹೊರತಾಗಿ ಹಂಪಾಪುರದಲ್ಲಿ ದುರ್ಗಾಪರಮೇಶ್ವರಿ ಅಮ್ಮನವರ ರಥೋತ್ಸವ, ತಿಪ್ಪೂರಿನಲ್ಲಿ ಲಕ್ಷ್ಮೀನಾರಾಯಣಸ್ವಾಮಿ ಜಾತ್ರೆ, ಮಾವತ್ತೂರಮ್ಮನ ಜಾತ್ರೆ, ಅರ್ಜುನಹಳ್ಳಿಯ ಕೆಂಗೇರಮ್ಮನ ಜಾತ್ರೆ, ತಂದ್ರೆಯ ದೇವಿರಮ್ಮನ ಜಾತ್ರೆ, ಕುಪ್ಪಳ್ಳಿಯ ಮಾದೇಶ್ವರ ಜಾತ್ರೆ, ಸಾಲಿಗ್ರಾಮ ಬಸವೇಶ್ವರ ಬಂಡಿ ಜಾತ್ರೆ ಹಾಗೂ ಚನ್ನಂಗೆರೆಯ ಓಕಳಿ ಹಬ್ಬದ ಸಿಡಿ ಜಾತ್ರೆ ಸೇರಿದಂತೆ ಅನೇಕ ಸಾಂಸ್ಕೃತಿಕ ಮಹತ್ವವುಳ್ಳ ಜಾತ್ರೆಗಳು ತಾಲೂಕಿನಾದ್ಯಂತ ನಡೆಯುತ್ತವೆ.

ಒಟ್ಟಾರೆಯಾಗಿ, ಕೃಷ್ಣರಾಜನಗರ ತಾಲೂಕಿನ ಜಾತ್ರೆಗಳು ಧಾರ್ಮಿಕ ಆಚರಣೆಗಳಷ್ಟೇ ಅಲ್ಲದೆ ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಪರಂಪರೆ ಹಾಗೂ ಗ್ರಾಮೀಣ ಆರ್ಥಿಕ ಚಟುವಟಿಕೆಗಳನ್ನು ಬಲಪಡಿಸುವ ಮಹತ್ವದ ಸಂಸ್ಥೆಗಳಾಗಿವೆ. ಇಂದಿನ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿಯೂ ಜಾತ್ರೆಗಳು ಬಂಧು–ಬಳಗ ಹಾಗೂ ಗ್ರಾಮಸ್ಥರನ್ನು ಒಂದೆಡೆ ಸೇರಿಸಿ ಬಾಂಧವ್ಯವನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ವೇದಿಕೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

**ಪರಾಮರ್ಶನ ಗ್ರಂಥಗಳು**


- ಅನಂತರಾಮು, ಟಿ.ಆರ್. (ಸಂ). (2012). *ಕಾವೇರಿ ಹರಿದು ಬಂದ ದಾರಿ.* ಕೀರ್ತನ ಪ್ರಕಾಶನ.
- ಜಗನ್ನಾಥ ಹೆಬ್ಬಾಳೆ. (2008). *ಹೈದ್ರಾಬಾದ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ.* ಕನ್ನಡ ಸಾಹಿತ್ಯ ಪರಿಷತ್ತು.
- *ಕನ್ನಡ ವಿಶ್ವಕೋಶಗಳು ಸಂಪುಟ 1– 14.* ಮೈಸೂರು ವಿಶ್ವವಿದ್ಯಾಲಯ.
- ಕೃಷ್ಣರಾಜನಗರ ತಾಲೂಕು ಗೆಜೆಟಿಯರ್
- ನಟರಾಜ್ ಎಚ್.ಸಿ. (2010). *ಎಡತೊರೆ– ಒಂದು ಸಾಂಸ್ಕೃತಿಕ ಅಧ್ಯಯನ* (ಎಂ.ಫಿಲ್ ನಿಬಂಧ), ಕನ್ನಡ ವಿಶ್ವವಿದ್ಯಾಲಯ.
- ಪ್ರಜಾವಾಣಿ. (2026, ಫೆಬ್ರವರಿ 20). *ಸಂಕ್ರಾಂತಿ ಬಳಿಕ ಜಾತ್ರೆಗಳ ಸಾಂಸ್ಕೃತಿಕ ವೈಭವ: ಕೆಲವು ಜಾತ್ರೆಗಳ ಚಿತ್ರಣ ಇಲ್ಲಿದೆ. https://www.prajavani.net*
- ಶ್ವೇತಾ. ಸಿ.ಎ. ಕೃಷ್ಣರಾಜ ನಗರ ತಾಲೂಕಿನ ಪ್ರಸಿದ್ಧ ಜಾತ್ರೆಗಳು–ಒಂದು ಅಧ್ಯಯನ.